**ದಿನಾಂಕ: 18-07-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು:** ಪ್ರತಿವಾದಿ ಪರ ಶ್ರೀ ಎಸ್ ವಿ ಎ **ವಕೀಲರಿಂದ**

ಸರ್ವೆ ನಂ.172 ರಲ್ಲಿ ಒಟ್ಟು ಎಷ್ಟು ಎಕರೆ ಜಮೀನು ಇದೆ ಎಂದರೆ ಸಾಕ್ಷಿ 9 ಚಿಲ್ಲರೆ ಎಕರೆ ಇರಬಹುದು ಎಂದು ನುಡಿದಿರುತ್ತಾರೆ. ಸರ್ವೆ ನಂ.172 ರಲ್ಲಿ ನಾವು 4 ಎಕರೆ 18 ಗುಂಟೆಯನ್ನು ಕ್ರಯಕ್ಕೆ ಪಡೆದಿರುತ್ತೇವೆ. ಸರ್ವೆ ನಂ.172/2 ರಲ್ಲಿ 1 ಎಕರೆ 22 ಗುಂಟೆಯನ್ನು ನಾವು ಹೆಚ್ ಎಂ ಪ್ರಕಾಶ್ ಬಿನ್ ಮಲ್ಲಪ್ಪನವರಿಂದ ಕ್ರಯಕ್ಕೆ ಪಡೆದಿರುತ್ತೇವೆ. ಸರ್ವೆ ನಂ.172/6 ರಲ್ಲಿ 2 ಎಕರೆ 13 ಗುಂಟೆಯನ್ನು ಯಾರಿಂದ ಪಡೆದಿರುತ್ತೀರಾ ಎಂದರೆ ಸಾಕ್ಷಿ 2 ಎಕರೆ 9 ಗುಂಟೆಯನ್ನು ಹೆಚ್ ಎಂ ಪ್ರಕಾಶ್ ರವರಿಂದ ಪಡೆದಿರುತ್ತೇವೆ ಎಂದು ನುಡಿದಿರುತ್ತಾರೆ. ನಾನು ನ್ಯಾಯಲಯಕ್ಕೆ ಸಲ್ಲಿಸಿರುವ ನಿಪಿ-4 ಕ್ರಯಪತ್ರವನ್ನು ಓದಿ ತಿಳಿದುಕೊಂಡಿರುತ್ತೇನೆ. ಸರ್ವೆ ನಂ.172/6 ರಲ್ಲಿ ನಾವು 2 ಎಕರೆ 9 ಗುಂಟೆಯಲ್ಲಿ ಸ್ವಾದೀನವಿದ್ದು, 4 ಎಕರೆ ಖರಾಬು ಇರುತ್ತದೆ. ಸರ್ವೆ ನಂ.172/1 ರಲ್ಲಿ 7 ಗುಂಟೆಯನ್ನು ಅದೇ ಹೆಚ್ ಎಂ ಪ್ರಕಾಶ್ ರವರಿಂದ ಕ್ರಯಕ್ಕೆ ಪಡೆದುಕೊಂಡಿರುತ್ತೇವೆ.

ಸರ್ವೆ ನಂ.172/5 ರಲ್ಲಿ 5 ಗುಂಟೆಯನ್ನು ಅದೇ ಹೆಚ್ ಎಂ ಪ್ರಕಾಶ್ ರವರಿಂದ ಕ್ರಯಕ್ಕೆ ಪಡೆದುಕೊಂಡಿರುತ್ತೇವೆ. ನಾವು ಕ್ರಯಕ್ಕೆ ಪಡೆದಿರುವ 4 ಎಕರೆ 18 ಗುಂಟೆಯ ಚಕ್ಕುಬಂದಿ ಪೂರ್ವಕ್ಕೆ: ಗಂಗಮ್ಮನವರ ಜಮೀನು, ಪಶ್ಚಿಮಕ್ಕೆ ಸರ್ಕಾರಿ ದಾರಿ, ಸದರಿ ದಾರಿಯು ತರೀಕೆರೆಯಿಂದ ಹಾದಿಕೆರೆ ಗ್ರಾಮಕ್ಕೆ ಹಾದಿಕೆರೆಯಿಂದ ರಾಗಿಬಸಪ್ಪನಹಳ್ಳಿಗೆ ಹೋಗುವ ದಾರಿ ಆಗಿರುತ್ತದೆ. ಉತ್ತರಕ್ಕೆ: ನಮ್ಮ ತಾಯಿಯ ಹೆಸರಿನಲ್ಲಿರುವ 1 ಎಕರೆ 31 ಗುಂಟೆ ಜಮೀನು, ದಕ್ಷಿಣಕ್ಕೆ: ನಮ್ಮ ತಾಯಿ ಹೆಸರಿನಲ್ಲಿರುವ ಮತ್ತು ನಮ್ಮದೇ ಜಮೀನು ಇರುತ್ತದೆ. ರಾಗಿಬಸಪ್ಪನಹಳ್ಳಿಗೆ ಹೋಗುವ ದಾರಿಯು 60 ಅಡಿ ಅಗಲ ಇರಬಹುದು. ದಾರಿಯು ನಮ್ಮ ಜಮೀನು ಮತ್ತು ಪಕ್ಕದ ಜಮೀನಿನ ಖರಾಬು ಜಮೀನಿನಲ್ಲಿ ಹೋಗಿರುತ್ತದೆ ಎಂದರೆ ಸರಿ. 4 ಎಕರೆ 18 ಗುಂಟೆ ಹೊರತುಪಡಿಸಿ ನಿಮ್ಮ ಬೇರೆ ಅಕ್ಕಪಕ್ಕ ಇರುವ ನಿಮ್ಮದೇ ಜಮೀನುಗಳನ್ನು ಅಳತೆ ಮಾಡಿಸಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. ಅವುಗಳನ್ನು ಅಳತೆ ಮಾಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ಸರ್ವೆ ನಂ.172 ನ್ನು ಸಂಪೂರ್ಣವಾಗಿ ಅಳತೆ ಮಾಡಿಸಿರುತ್ತೀರಾ ಎಂದರೆ ಸಾಕ್ಷಿ ಕೇವಲ 7 ಗುಂಟೆಯನ್ನು

ಹದ್ದುಬಸ್ತು ಮಾಡಿಸಿರುತ್ತೇನೆಂದು ನುಡಿದಿರುತ್ತಾರೆ. ಉಳಿದ ಜಮೀನನ್ನು ಅಳತೆ ಮಾಡಿಸಲು ಏಕೆ ಸಾಧ್ಯವಾಗಿಲ್ಲ ಎಂದರೆ ಸಾಕ್ಷಿ ನಾವು ಮಾಡಿಸಿರುವುದಿಲ್ಲ ಎಂದು ನುಡಿದಿರುತ್ತಾರೆ. ನಾವು ಪ್ರಕಾಶ್ ರವರಿಂದ ಕ್ರಯಕ್ಕೆ ಪಡೆದ ಜಮೀನು ಪ್ರಕಾಶ್ ರವರು ನಂದ್ಯಪ್ಪನವರಿದ ಪಡೆದುಕೊಂಡಿರುವ ಜಮೀನು ಆಗಿರುತ್ತದೆ. 1951 ನೇ ಇಸವಿಯಿಂದ 2025 ಇಸವಿಯವರೆಗೂ ಇದೆ ಜಾಗದಲ್ಲಿ ಪ್ರಕಾಶ್ ರವರು ಸ್ವಾಧೀನದಲ್ಲಿರುತ್ತಾರೆ. ಪ್ರಕಾಶ್ ರವರಿಂದ ಕ್ರಯಕ್ಕೆ ಪಡೆದ ಜಾಗದಲ್ಲಿ ನಾವು ಈಗ ಸ್ವಾಧೀನದಲ್ಲಿರುತ್ತೇವೆ. ಗಂಗಮ್ಮನವರ ಜಮೀನಿನ ಸರ್ವೆ ನಂ.171/2 ಆಗಿರುತ್ತದೆ. ಗಂಗಮ್ಮನವರ ಜಮೀನು ಅವರ ಪಿತ್ರಾರ್ಜಿತ ಆಸ್ತಿ ಅಗಿರುತ್ತದೆ ಎಂದರೆ ಸಾಕ್ಷಿ ಇರಬಹುದು ಎಂದುನುಡಿದಿರುತ್ತಾರೆ. ಗಂಗಮ್ಮನವರು ಸರ್ವೆ ನಂ.171/2 ರಲ್ಲಿ 2 ಎಕರೆ 16 ಗುಂಟೆ ಸ್ವಾಧೀನದಲ್ಲಿರುತ್ತಾರೆಂದರೆ ಸಾಕ್ಷಿ ಹೌದು ಎಂದು ನುಡಿದಿರುತ್ತಾರೆ. ಗಂಗಮ್ಮನವರು ಅವರ ತೋಟದಲ್ಲಿ ಮಾವಿನ ತೋಟವನ್ನು ಬೆಳೆಸಿರುತ್ತಾರೆ. ಸದರಿ ಮಾವಿನ ತೋಟದ ಮರಗಳು 25 ವರ್ಷಗಳ ಹಳೆಯದಾಗಿರುತ್ತದೆ ಎಂದರೆ ಸರಿ. ಅಳತೆ ಮಾಡುವ ಸಮಯದಲ್ಲಿ ಸರ್ವೆಯರ್ ರವರಿಗೆ 172 ಸರ್ವೆ ನಂಬರಿನ ಸಂಪೂರ್ಣ ಜಮೀನು ಅಳತೆ ಮಾಡಿರುತ್ತಾರಾ ಎಂದರೆ ಸಾಕ್ಷಿ ಮಾಡಿರುತ್ತಾರೆಂದು ನುಡಿದಿರುತ್ತಾರೆ. ಸರ್ವೆಯರ್ ರವರು ಸರ್ವೆ ನಂ.172 ಸಂಪೂರ್ಣ ಜಾಗವನ್ನು ಸರ್ವೇ ಮಾಡಿಸಿರುವ ಬಗ್ಗ ಸ್ಕೆಚ್ ನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಹಾಜರುಪಡಿಸಿದ್ದೇನೆಂದು ನುಡಿದಿರುತ್ತಾರೆ.

ಅಳತೆ ಮಾಡುವ ಸಮಯದಲ್ಲಿ ರಾಗಿಬಸವಪ್ಪನಹಳ್ಳಿಗೆ ಹೋಗಲು ಬಿಟ್ಟಿರುವ ದಾರಿಯು ಎಷ್ಟು ಗುಂಟೆ ಬಿಟ್ಟಿದ್ದಾರೆಂದು ನಮೂದು ಆಗಿದೆಯೇ ಎಂದರೆ ಸರ್ವೆಯರ್ ರವರು ಸದರಿ ರಸ್ತೆಯನ್ನು ಬಿಟ್ಟು ಸರ್ವೆ ಮಾಡಿರುತ್ತಾರೆಂದರೆ ಸಾಕ್ಷಿ ಹೌದು ಎಂದು ನುಡಿದಿರುತ್ತಾರೆ. ಸರ್ವೆಯರ್ ರವರು ದಾರಿಗೆ ಸೇರಿರುವ 4 ಗುಂಟೆಯನ್ನು ಬಿಟ್ಟು ಅಳತೆ ಮಾಡಿರುವುದರಿಂದ ಪ್ರತಿವಾದಿಗಳು ನಿಮ್ಮ ಜಮೀನಿನ 4 ಗುಂಟೆ ಒತ್ತುವರಿ ಮಾಡಿರುತ್ತಾರೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಾ ಎಂದರೆ ಸರಿಯಲ್ಲ. ನೀವು ನ್ಯಾಯಾಲಯಕ್ಕೆ ನೀವು ನ್ಯಾಯಾಲಯಕ್ಕೆ ಸರ್ವೆಯರ್ ಜೊತೆ ಸೇರಿ ದಾಖಲಾತಿಗಳನ್ನು ಸೃಷ್ಠಿ ಮಾಡಿ ಹಾಜರುಪಡಿಸಿರುತ್ತಿರಾ ಎಂದರೆ ಸಾಕ್ಷಿ ರಸ್ತೆ ಇರುವುದು, ಪೋಡಿ

ಮಾಡಿರುವುದು ಬೇರೆ ಬೇರೆ ಆಗಿರುತ್ತದೆ ಎಂದು ನುಡಿದಿರುತ್ತಾರೆ. ಅಳತೆ ಮಾಡುವ ಸಮಯದಲ್ಲಿ ಅಕ್ಕಪಕ್ಕದ ಜಮೀನುದಾರರಿಗೆ ನೋಟೀಸು ನೀಡಿದ್ದೀರಾ ಎಂದರೆ ಸಾಕ್ಷಿ ಹೌದು ಎಂದು ನುಡಿದಿರುತ್ತಾರೆ. ನಿಮ್ಮ 4 ಎಕರೆ 18 ಗುಂಟೆ ಯ ದಕ್ಷಿಣಕ್ಕೆ ಮತ್ತು ಉತ್ತರಕ್ಕೆ ನಿಮ್ಮದೇ ಜಮೀನು ಇರುತ್ತದೆ ಎಂದರೆ ಸರಿ. ಸರ್ವೆ ನಂ.172 ರಲ್ಲಿ 4 ಗುಂಟೆ ಖರಾಬು ಇರುವ ಬಗ್ಗೆ ಸರ್ವೇಯರ್ ನಮೂದು ಮಾಡಿರುತ್ತಾರಾ ಎಂದರೆ ಸಾಕ್ಷಿ ಸರ್ವೆ ನಂ.172/6 ರಲ್ಲಿ ಖರಾಬು ಇರುತ್ತದೆ ಎಂದು ನುಡಿದಿರುತ್ತಾರೆ.

ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

ಓ. ಕೇ. ಸ. ಇ. ಎ. ಒ.

Sd/-
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**